
ಜ್ಞಾನಿಯೂ ಇರಬಹುದು, ಏಸುಕ್ರಿಸ್ತನಂಥ ಶ್ರೇಷ್ಠ ಸಂತನೂ ಇರಬಹುದು, ಆದರೆ ಅವರೆಲ್ಲರೂ ಆ ಸಮಾಜದ ದೃಷ್ಟಿಯಲ್ಲಿ ವಿನಯಭ್ರಷ್ಟರಾಗಿಯೇ, ಅಪರಾಧಿಗಳಾಗಿಯೇ ಕಾಣಿಸುತ್ತಾರೆ. ಆದ್ದರಿಂದ ಸಮಾಜ ಅಂಥವರನ್ನು ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಹತ್ತಿಕ್ಕುತ್ತದೆ. ಚರಿತ್ರೆಯ ಉದ್ದಕ್ಕೂ ಇದಕ್ಕೆ ಉದಾಹರಣೆಗಳು ಹೇರಳವಾಗಿ ಸಿಕ್ಕುತ್ತವೆ.

ಕವಿ, ಸಾಹಿತಿಗಳೂ ಸಮಾಜ ಜೀವಿಗಳೇ. ಅವರೂ ಒಂದಲ್ಲ ಒಂದು ಸಮಾಜದಲ್ಲಿ ಬಾಳಿ ಬದುಕುವವರೇ, ಬದುಕಬೇಕಾದವರೇ, ಸಾಮಾನ್ಯವಾಗಿ ಎಲ್ಲ ನಾಗರಿಕ ಸಮಾಜಗಳಲ್ಲಿಯೂ ಕವಿ, ಸಾಹಿತಿಗಳನ್ನು ಅಸಾಮಾನ್ಯ ಪ್ರತಿಭಾಶಾಲಿಗಳು, ಅತ್ಯುನ್ನತ ಮಟ್ಟದ ಸಂವೇದನಾಶೀಲರು ಎಂದು ತಿಳಿದು ಗೌರವಿಸಲಾಗುತ್ತದೆ. ಸಾಹಿತ್ಯವನ್ನು ಆಯಾ ಸಮಾಜದ ಸಂಸ್ಕೃತಿಯ ಅತ್ಯುತ್ತಮ ಫಲ ಎಂದೂ ಕೀರ್ತಿಸಲಾಗುತ್ತದೆ. ಆಯಾ ಸಮಾಜ ತಾನು ನಂಬಿ ಬಾಳುತ್ತಿರುವ ಜೀವನ ಮೌಲ್ಯ ವ್ಯವಸ್ಥೆಯೇ ಶ್ರೇಷ್ಠ ಅದೇ ಪರಿಪೂರ್ಣ ಎಂಬ ಭ್ರಮೆಯಲ್ಲಿ ಸಾಮಾನ್ಯವಾಗಿ ಇರುತ್ತದೆ. ಆದ್ದರಿಂದ ಕವಿ ಸಾಹಿತಿಗಳನ್ನು ಅಸಾಧಾರಣ ಚೇತನಗಳು ಎಂದು ಭಾವಿಸಿದ್ದರೂ ಅವರ ಪ್ರತಿಭೆ, ಅವರ ಸಂವೇದನಾಶೀಲತೆ ಆ ಸಮಾಜ ಒಪ್ಪಿ ಬಾಳುತ್ತಿರುವ ಮೌಲ್ಯದ ಚೌಕಟ್ಟನ್ನೂ ಭೇದಿಸಿ ಜೀವನಸತ್ವಗಳನ್ನು ಕಾಣಲೂಬಹುದು ಎಂಬ ಪರಿಜ್ಞಾನ ಆ ಸಮಾಜಕ್ಕೆ ಇರುವುದಿಲ್ಲ. ಆದ್ದರಿಂದ ಈಗಾಗಲೇ ಸಮಾಜ ನಂಬಿಕೊಂಡುಬಂದಿರುವ ಜೀವನ ಮೌಲ್ಯಗಳನ್ನೇ ಕವಿ, ಸಾಹಿತಿಗಳು ತಮ್ಮ ಬರವಣಿಗೆಗಳಲ್ಲಿ ಪ್ರಶ್ನಿಸದೆ ಉಜ್ವಲೀಕರಿಸಿದರೆ, ಕೀರ್ತಿಸಿದರೆ ಸಮಾಜದ ಬಹುಸಂಖ್ಯಾತರು ಪ್ರಸನ್ನರಾಗುತ್ತಾರೆ. ಅಂಥ ಕವಿಯನ್ನು ಬಿರುದು ಬಹುಮಾನಗಳನ್ನಿತ್ತು ಸನ್ಮಾನಿಸುತ್ತಾರೆ. ಏಕೆಂದರೆ ಅಂಥ ಸಾಹಿತಿ ತನ್ನ ಸಮಾಜ ಒಪ್ಪಿ, ನಂಬಿಕೊಂಡುಬಂದಿರುವ ಮೌಲ್ಯಗಳನ್ನು ಕೀರ್ತಿಸುವುದರ ಮೂಲಕ, ಉಜ್ವಲೀಕರಿಸುವುದರ ಮೂಲಕ ಆ ಸಮಾಜದ 'ಅಹಂಕಾರ'ವನ್ನೇ ಪೋಷಿಸಿರುತ್ತಾನೆ. ಆ ಸಮಾಜದಲ್ಲಿ ಇತರ ಯಾರಿಂದಲೂ ಸಾಧ್ಯವಾಗದ ರೀತಿಯಲ್ಲಿ ಆ ಕೆಲಸವನ್ನು ಆತ ಮಾಡಿರುತ್ತಾನೆ. ಆದ್ದರಿಂದಲೇ ಸಮಾಜ ಅವನ 'ವಿನಯ'ವನ್ನು ಕೊಂಡಾಡುತ್ತದೆ. ಅವನು 'ಜನಪ್ರಿಯ' ಸಾಹಿತಿಯಾಗುತ್ತಾನೆ.

ಇಂಥ ಜನಪ್ರಿಯ ಸಾಹಿತಿಗಳಲ್ಲಿ, ಎರಡು ಬಗೆಯವರಿರುವುದು ಸಾಧ್ಯ. ಒಂದು ಬಗೆಯವರ ಪ್ರತಿಭೆಗೆ, ಸಂವೇದನಶೀಲತೆಗೆ ಹೊಸಹೊಸತನ್ನು ಕಾಣುವ ಶಕ್ತಿ ಕಡಿಮೆ ಇರಬಹುದು. ಈಗಾಗಲೇ ಸಮಾಜ ಒಪ್ಪಿಕೊಂಡಿರುವ ಜೀವನಮೌಲ್ಯಗಳ ಮತ್ತು ಅಭಿವ್ಯಕ್ತಿ ವಿಧಾನಗಳ ಚೌಕಟ್ಟಿನ ಆಚೆ ಹೊಸತೇನನ್ನೂ ಕಾಣಲಾರದಂಥ, ಹೊಸತೇನನ್ನೂ ಸೃಷ್ಟಿಸಲಾರದಂಥ ಮಿತಿ ಅವನ ಸಂವೇದನೆಯಲ್ಲಿಯೇ ಇರಬಹುದು. ಈಗಾಗಲೇ ಸಾಮೂಹಿಕವಾಗಿ ಸಿದ್ಧವಾಗಿರುವ ಜೀವನಮೌಲ್ಯಗಳಿಗೇ, ಅಭಿವ್ಯಕ್ತಿ ವಿಧಾನಗಳಿಗೆ ಆತ ಬದ್ಧನಾಗಿ, ವಿಧೇಯನಾಗಿ ಬರೆಯುತ್ತಿದ್ದರೂ ಹೇಳುವುದನ್ನು ಸ್ವಾರಸ್ಯಪೂರ್ಣವಾಗಿ, ರಂಜನೀಯವಾಗಿ ಹೇಳುವ ಚಾಲಕು ಮಾತ್ರವೇ ಆತನ ಪ್ರತಿಭೆಯ ಗುಣವಿಶೇಷ ಆಗಿರಬಹುದು, ಅವನ ಬರವಣಿಗೆಯ ಮೂಲಕ ಪ್ರಕಟವಾಗಬಹುದಾದ ವಿನಯ


ಕಲೆ: ಬಸವರಾಜ ಕಲೆಗಾರ